29ನೇ ಪುಟದಿಂದ

# ಬಾಲಿವುಡ್ ಟಾಪ್ 10 ಚಿತ್ರಗಳು



ಹಾಡುಗಳಲ್ಲಿ ಮಾತ್ರವಲ್ಲ, ನವಿರಾದ ಪ್ರೇಮಕಥನದ ಮೂಲಕವೂ ಜನರನ್ನು ಸೆಳೆದ ಆಶಿಕಿ 2

ಕಥಾವಸ್ತು, ನಿರೂಪಣೆ, ಪ್ರಯೋಗಶೀಲತೆ ಮುಂತಾದ ಕಾರಣಗಳಿಂದ ಹಲವು ಚಿತ್ರಗಳು ತೀವ್ರ ಚರ್ಚೆಯನ್ನು ಹುಟ್ಟುಹಾಕಿದ್ದರೂ, ಗೆಲುವಿನ ಮಾನದಂಡ ಆ ಚಿತ್ರದ ಒಟ್ಟಾರೆ ಗಳಿಕೆಯೇ. ಸರಾಸರಿ ಗಳಿಕೆಯ ಲೆಕ್ಕಾಚಾರದಲ್ಲಿ ಡಿಸೆಂಬರ್‌ವರೆಗೆ ಬಾಲಿವುಡ್‌ನಲ್ಲಿ ಮೊದಲ 10 ಸ್ಥಾನ ಪಡೆದ ಚಿತ್ರಗಳಿವು:

**1. ಚೆನ್ನೈ ಎಕ್ಸ್‌ಪ್ರೆಸ್:** ರೋಹಿತ್ ಶೆಟ್ಟಿ ನಿರ್ದೇಶನದ 'ಚೆನ್ನೈ ಎಕ್ಸ್‌ಪ್ರೆಸ್' 2013ರ ಅತಿ ದೊಡ್ಡ ಹಿಟ್ ಚಿತ್ರ. ಭಾರತದಲ್ಲಿ ಬರೋಬ್ಬರಿ 208.70 ಕೋಟಿ ರೂಪಾಯಿ ಮತ್ತು ಸಾಗರದಾಚೆ 1.93 ಕೋಟಿ ಡಾಲರ್ ಗಳಿಕೆ ಕಂಡ 'ಚೆನ್ನೈ ಎಕ್ಸ್‌ಪ್ರೆಸ್' ಬಾಲಿವುಡ್‌ನ ಹಲವು ದಾಖಲೆಗಳನ್ನು ಮುರಿಯಿತು. ಶಾರೂಕ್ ಖಾನ್ ಮತ್ತು ದೀಪಿಕಾ ಪಡುಕೋಣೆ ಮುಖ್ಯ ಪಾತ್ರದಲ್ಲಿ ಅಭಿನಯಿಸಿದ್ದ ಈ ಚಿತ್ರದ ಬೇರುಗಳು ಇದ್ದದ್ದು ದಕ್ಷಿಣ ಭಾಷೆಯ ಚಿತ್ರಗಳಲ್ಲಿ. ಗಟ್ಟಿಯಾದ ಕಥನ, ವಿಶೇಷ ನಿರೂಪಣೆ ಇಲ್ಲದಿದ್ದರೂ ರಂಜನೀಯವಾಗಿದ್ದ ಚಿತ್ರ ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು.

**2. ಯೇ ಜವಾನಿ ಹೇ ದೀವಾನಿ:** ರಣಬೀರ್ ಕಪೂರ್ ಮತ್ತು ದೀಪಿಕಾ ಪಡುಕೋಣೆ ಅಭಿನಯದ ಚಿತ್ರ ಗಳಿಸಿದ್ದು 179 ಕೋಟಿ ರೂಪಾಯಿ. ಅಯಾನ್ ಮುಖರ್ಜಿ ನಿರ್ದೇಶನದ ಈ ಚಿತ್ರ ಯುವಜನತೆಯ ಆಸೆ ಆಕಾಂಕ್ಷೆಗಳು, ತವಕ ತಲ್ಲಣಗಳನ್ನು ಲಘುವಾಗಿ ಬಿಂಬಿಸುತ್ತಲೇ ಪ್ರೇಮಕಥನವನ್ನು ನವಿರಾಗಿ ಚಿತ್ರಿಸಿತ್ತು.



ಮದ್ರಾಸ್ ಕೆಫೆ



ರಾಂಗೋಪಾಲ್ ವರ್ಮಾ

**3. ಕ್ರಿಶ್ 3:** ಕ್ರಿಶ್ ಸರಣಿಯ ಮೂರನೇ ಚಿತ್ರ ಹೃತಿಕ್ ರೋಷನ್ ಪಾಲಿಗೆ ಅಳಿವು ಉಳಿವಿನ ಪ್ರಶ್ನೆಯಾಗಿತ್ತು. ಆರೋಗ್ಯದ ಸಮಸ್ಯೆಯಿಂದ ಬಳಲುತ್ತಿರುವ ಹೃತಿಕ್‌ಗೆ ಗೆಲುವಿನ ಅನಿವಾರ್ಯತೆಯೂ ಇತ್ತು. ಸಾಹಸಮಯ ಸನ್ನಿವೇಶಗಳನ್ನು ಒಳಗೊಂಡ ಚಿತ್ರ ಮಕ್ಕಳನ್ನು ಹೆಚ್ಚಾಗಿ ಆಕರ್ಷಿಸಿತು. ಪ್ರಿಯಾಂಕಾ ಚೋಪ್ರಾ, ಕಂಗನಾ ರನೌತ್, ವಿವೇಕ್ ಒಬೆರಾಯ್ ಮುಖ್ಯಭೂಮಿಕೆಯಲ್ಲಿದ್ದ ಚಿತ್ರ ಸುಮಾರು 178 ಕೋಟಿ ರೂಪಾಯಿ ಕೊಳ್ಳೆಹೊಡೆಯಿತು.

**4. ಭಾಗ್ ಮಿಲ್ಖಾ ಭಾಗ್:** ದೇಶ ಕಂಡ ಅಪ್ರತಿಮ ಅಥ್ಲೀಟ್ ಮಿಲ್ಖಾ ಸಿಂಗ್ ಅವರ ಜೀವನಗಾಥೆಯನ್ನು ಸಿನಿಮಾ ರೂಪಕ್ಕೆ ತಂದ ಕೀರ್ತಿ ರಾಕೇಶ್ ಓಂಪ್ರಕಾಶ್ ಮೆಹ್ರಾ ಅವರದು. ಫರ್ಹಾನ್ ಅಖ್ತರ್ ಮತ್ತು ಸೋನಂ ಕಪೂರ್ ಅಭಿನಯದ ಈ ಚಿತ್ರ ನಿರೀಕ್ಷೆಗೂ ಮೀರಿ ಯಶ ಕಂಡಿತು. ಮಾತ್ರವಲ್ಲ, ಈ ಬಗೆಯ ಸಾಧಕರ ಜೀವನಚರಿತ್ರೆ ಆಧಾರಿತ ಸಿನಿಮಾಗಳ ಸೃಷ್ಟಿಗೂ ಪ್ರೇರಣೆ ನೀಡಿತು. 108.91 ಕೋಟಿ ಗಳಿಸಿದ 'ಭಾಗ್....' ಈ ವರ್ಷದ ಅತ್ಯುತ್ತಮ ಚಿತ್ರಗಳ ಪೈಕಿ 'ದಿ ಲಂಚ್ ಬಾಕ್ಸ್' ಚಿತ್ರದೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದೆ.

**5. ಗೋಲಿಯೋಂಕಿ ರಾಸ್‌ಲೀಲಾ –ರಾಮ್‌ಲೀಲಾ:** ಗುಂಡು ಹಾರಿಸಿ ಸಾಯಿಸುವುದನ್ನೂ ಮೋಜಿನ ಆಟವಾಗಿ ಚಿತ್ರಿಸಿದವರು ಸಂಜಯ್ ಲೀಲಾ ಬನ್ಸಾಲಿ. ರಣವೀರ್ ಸಿಂಗ್ ಮತ್ತು ದೀಪಿಕಾ ಪಡುಕೋಣೆ ನಾಯಕ–ನಾಯಕಿಯಾಗಿ ಕಾಣಿಸಿಕೊಂಡಿರುವ ಈ ಚಿತ್ರ ಬಿಡುಗಡೆಗೂ ಮುನ್ನವೇ ವಿವಾದಗಳ ಕಾರಣದಿಂದ ಸುದ್ದಿಯಲ್ಲಿತ್ತು. ಆರಂಭದ ನಿರೀಕ್ಷೆಗಳಂತೆಯೇ ಚಿತ್ರಕ್ಕೆ ಭರ್ಜರಿ ಓಪನಿಂಗ್ ಸಿಕ್ಕರೂ '.... ರಾಮ್‌ಲೀಲಾ' ಜನರ ಮನಸ್ಸಿನಲ್ಲಿ ಅಚ್ಚೊತ್ತುವಲ್ಲಿ ವಿಫಲವಾಯಿತು. ಆದರೂ 106 ಕೋಟಿ ರೂ ಗಳಿಕೆ ಕಂಡ ಈ ಸಿನಿಮಾ ವರ್ಷದ ಹಿಟ್ ಚಿತ್ರಗಳ ಪಟ್ಟಿಯಲ್ಲಿ ಸ್ಥಾನಪಡೆದಿದೆ.

**6. ಗ್ರ್ಯಾಂಡ್ ಮಸ್ತಿ:** ರಿತೇಶ್ ದೇಶಮುಖ್, ವಿವೇಕ್ ಒಬೆರಾಯ್, ಅಫ್ತಬ್ ಶಿವದಾಸಾನಿ, ಕರಿಷ್ಮಾ ತನ್ನಾ ಮುಂತಾದ ಸೋಲುಗಳ ಸರಪಣಿಯಲ್ಲೇ ಬಂಧಿಯಾಗಿದ್ದ ಕಲಾವಿದರನ್ನು ಒಳಗೊಂಡಿದ್ದ 'ಗ್ರ್ಯಾಂಡ್ ಮಸ್ತಿ' ಈ ವರ್ಷದ ಅಚ್ಚರಿಯ ಗೆಲುವು. ದ್ವಂದ್ವಾರ್ಥದ ಸಂಭಾಷಣೆ, ಸನ್ನಿವೇಶಗಳಿಂದ ತುಂಬಿದ್ದ ಇಂದ್ರಕುಮಾರ್ ನಿರ್ದೇಶನದ ಈ ಚಿತ್ರ ಊಹೆಗೂ ಮೀರಿ ಶತಕೋಟಿ ಕ್ಲಬ್‌ನ ಸದಸ್ಯತ್ವ ಪಡೆದಿದೆ.

**7. ರೇಸ್ 2:** ಕಳ್ಳತನ, ವಂಚನೆಯನ್ನೇ ಸಾಹಸಮಯವಾಗಿ ಬಿಂಬಿಸಿದ 'ರೇಸ್' ಚಿತ್ರದ ಮುಂದುವರಿದ ಭಾಗ 'ರೇಸ್ 2'. ಅಬ್ಬಾಸ್—ಮಸ್ತಾನ್ ಜೋಡಿಯ ಈ ಸಿನಿಮಾ ಹಾಲಿವುಡ್ ಚಿತ್ರದ ಸ್ಫೂರ್ತಿಯಿಂದ ಜನಿಸಿರುವುದು. ಸೈಫ್ ಅಲಿಖಾನ್, ಜಾನ್ ಅಬ್ರಹಾಂ, ದೀಪಿಕಾ ಪಡುಕೋಣೆ, ಜಾಕ್ವೆಲಿನ್ ಫರ್ನಾಂಡಿಸ್, ಅನಿಲ್ ಕಪೂರ್, ಅಮೀಶಾ ಪಟೇಲ್‌ರಂಥ ಖ್ಯಾತನಾಮರ ಬಳಗವನ್ನೇ ಹೊಂದಿದ್ದ ಈ ಚಿತ್ರ ಭಾರತೀಯ ಹಾಗೂ ಸಾಗರೋತ್ತರ ಪ್ರದರ್ಶನಗಳಿಂದ ನೂರು ಕೋಟಿ ಗಳಿಕೆಯ ಗಡಿಯನ್ನು ತಲುಪಿತು.

**8. ಆಶಿಕಿ 2:** ಜನಪ್ರಿಯತೆಯ ನೆಲೆಗಟ್ಟಿನಲ್ಲಿ 'ಆಶಿಕಿ 2' ಚಿತ್ರಕ್ಕೆ ಎರಡನೇ ಸ್ಥಾನ. 2013ರ ಅತ್ಯಂತ ಯಶಸ್ವಿ ಹಾಡುಗಳನ್ನು ನೀಡಿದ ಚಿತ್ರವಿದು. ಹಾಡುಗಳಿಂದ ಮಾತ್ರವಲ್ಲ, ಭಿನ್ನ ಕಥನದ ಕಾರಣಕ್ಕೂ ಸಿನಿಮಾ ಜನಪ್ರಿಯತೆ ಪಡೆಯಿತು. ಮೋಹಿತ್ ಸೂರಿ ನಿರ್ದೇಶನದ 'ಆಶಿಕಿ' ಚಿತ್ರದ ಮುಂದುವರಿದ ಈ ಭಾಗದಿಂದ ಆದಿತ್ಯ ರಾಯ್ ಕಪೂರ್ ಮತ್ತು ಶ್ರದ್ಧಾ ಕಪೂರ್ ಎಂಬ ಪ್ರತಿಭೆಗಳು ಬೆಳಕಿಗೆ ಬಂದರು. ಈ ಚಿತ್ರದ ಗಳಿಕೆ ಸುಮಾರು 78 ಕೋಟಿ ರೂ.

**9. ಸ್ಪೆಷಲ್ 26:** ಹಾಸ್ಯ ಮತ್ತು ನಾಟಕೀಯ ಕಥನದ ಮೂಲಕ 'ಸ್ಪೆಷಲ್ 26' ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಅಕ್ಷಯ್ ಕುಮಾರ್, ಕಾಜಲ್ ಅಗರ್‌ವಾಲ್ ಅಭಿನಯದ ಈ ಚಿತ್ರವನ್ನು ನೀರಜ್ ಪಾಂಡೆ ನಿರ್ದೇಶಿಸಿದ್ದಾರೆ. ಅಪಾರ ನಿರೀಕ್ಷೆ ಹುಟ್ಟುಹಾಕಿದ್ದ ಈ ಚಿತ್ರ 73 ಕೋಟಿ ಗಳಿಕೆ ಕಾಣುವಲ್ಲಿ ಯಶಸ್ವಿಯಾಯಿತು.

**10. ಒನ್ಸ್ ಅಪಾನ್ ಎ ಟೈಮ್ ಇನ್ ಮುಂಬೈ ದುಬಾರಾ:** ಅಕ್ಷಯ್ ಕುಮಾರ್, ಇಮ್ರಾನ್ ಖಾನ್, ಸೋನಾಕ್ಷಿ ಸಿನ್ಹಾ, ಸೋನಾಲಿ ಬೇಂದ್ರೆ ಮುಖ್ಯ ಭೂಮಿಕೆಯಲ್ಲಿದ್ದ 'ಒನ್ಸ್ ಅಪಾನ್ ಎ ಟೈಮ್ ಇನ್ ಮುಂಬೈ ದುಬಾರ' ಅಪರಾಧ ಜಗತ್ತು ಮತ್ತು ಪ್ರೇಮಕಥೆಗಳ ಸಂಗಮ. 'ಒನ್ಸ್ ಅಪಾನ್ ಎ ಟೈಮ್ ಇನ್ ಮುಂಬೈ' ಚಿತ್ರದ ಮುಂದುವರಿದ ಭಾಗವಿದು. 68 ಕೋಟಿ ರೂಪಾಯಿಗಳಿಸುವ ಮೂಲಕ ಟಾಪ್ 10ರಲ್ಲಿ ಕೊನೆಯ ಸ್ಥಾನದ ಗಿಟ್ಟಿಸುವಲ್ಲಿ ಸಫಲರಾದರೂ ಈ ಚಿತ್ರವನ್ನು ಫ್ಲಾಪ್ ಸಿನಿಮಾ ಎಂದೇ ಪರಿಗಣಿಸಲಾಗಿದೆ.

ರಾಮ್ ಲೀಲಾ ಚಿತ್ರದ ದೃಶ್ಯ

